# ಇದನ್ನು ಮಾಡುವುದು ಹೇಗೆ?.......

## ನಗರ ವಾರ್ಡ್ ಕಮಿಟಿಗಳ ಕಾರ್ಯ ದಕ್ಷತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕಾರ್ಯಾಗಾರ





**ತಿಳಿಯಿರಿ ಮತ್ತು ಯೋಚಿಸಿ**

- **ವಾರ್ಡ್ ಕಮಿಟಿಯ ಬಗ್ಗೆಗಿನ ಆದೇಶ**
- **ವಾರ್ಡ್ ಕಮಿಟಿಯ ಕಾರ್ಯಗಳು**
- **ವಾರ್ಡ್ ಕಮಿಟಿಯ ಕಾರ್ಯಾಚರಣೆಗೆ ಸವಾಲುಗಳು**

**ನಾಗರೀಕ–ಸ್ನೇಹಿ ರೀತಿಯಲ್ಲಿ ನಗರವನ್ನು ಸುಧಾರಿಸಲು ವಾರ್ಡ್ ಕಮಿಟಿಯೊಂದಿಗೆ ಹೇಗೆ ಸೇರಿ ಕೆಲಸ ಮಾಡುವುದು**

ದಿನಾಂಕ: 19ನೇ ಜನವರಿ, 2018, **ಶುಕ್ರವಾರ**

ವೇಳೆ: 5.30 ರಿಂದ 8.00 pm

ಸ್ಥಳ: ಪರಿಸರ ಬೆಂಬಲ ತಂಡದ ಕಾರ್ಯಾಗಾರ ಸ್ಥಳ, ನಂ. 1575 ರಿಂಗ್ ರೋಡ್, ಬನಶಂಕರಿ 2ನೇ ಹಂತ, ಬೆಂಗಳೂರು–70

https://goo.gl/maps/agJvCSPqk2E2

ಸೂಚಿತ ಕೊಡುಗೆ:250 Rs

http://www.esgindia.org/about-us/what-you-can-do.html

ನೋಂದಣಿ: esg@esgindia.org

080 2671 3560/61

**ಕಾರ್ಯಾಗಾರ ನಡೆಸಿಕೊಡುವವರು: ಲಿಯೋ ಎಫ್. ಸಲ್ದಾನ್ಹಾ, ಶ್ವೇತಾ ರಾವ್ ಧನಂಕಾ, ವಿನಯ್ ಶ್ರೀನಿವಾಸ**




# ಇದನ್ನು ಮಾಡುವುದು ಹೇಗೆ?.......ಕಾರ್ಯಾಗಾರಗಳು

## ಪರಿಸರ ಬೆಂಬಲ ತಂಡ (ಇಎಸ್‌ಜಿ)ಯ ತೊಡಗುವಿಕೆ

### ವಾರ್ಡ್ ಸಮಿತಿಗಳನ್ನು ನಗರದಲ್ಲಿ ಕಾರ್ಯನಿರ್ವಹಿಸುವಂತೆ ಮಾಡುವುದು ಹೇಗೆ?

ಈ ಕಾರ್ಯಾಗಾರದ ಆಯೋಜಕರು ವಾರ್ಡಸಮಿತಿಗಳಿಗೆ ಹೇಗೆ ಉತ್ತಮ ವಾರ್ಡ್ ಸಮಿತಿಗಳನ್ನು ಮೂಲ ಘಟಕಗಳಾಗಿಸುವ ಸಂವಿಧಾನಾತ್ಮಕ ನಿರ್ದೇಶನವನ್ನು ಕಾರ್ಯರೂಪಕ್ಕೆ ತಂದು ನಗರಾಡಳಿತದ ಗುಣಮಟ್ಟವನ್ನು ಹೇಗೆ ಸುಧಾರಿಸಬಹುದು ಎಂಬುದನ್ನು ಪ್ರತಿನಿಧಿಗಳಿಗೆ ತಿಳಿಸಲು ಸಹಾಯ ಮಾಡಲಿದ್ದಾರೆ. ಈ ಪ್ರಕ್ರಿಯೆಯಲ್ಲಿ, ವಾರ್ಡ ಸಮಿತಿಗಳು ನಾಗರಿಕರ ಪ್ರಯತ್ನಗಳನ್ನು ಬಳಸಿ ಉತ್ತಮ ನಗರಾಡಳಿತವನ್ನು ಹೇಗೆ ಸುಧಾರಿಸಬಹುದು ಮತ್ತು ನಾಗರಿಕರಿಗೆ ಬೇಕಾದ ಸೇವೆ ಮತ್ತು ಸೌಲಭ್ಯಗಳನ್ನು ಒದಗಿಸಿ ಜೀವನ ಮಟ್ಟವನ್ನು ಹೇಗೆ ಸುಧಾರಿಸಬಹುದು ಎಂಬುದನ್ನು ಪ್ರತಿನಿಧಿಗಳು ಕಲಿಯಬಹುದು. ವಾರ್ಡಸಮಿತಿಯ ಕಾರ್ಯಕ್ರಮಗಳು ಮತ್ತು ಕರ್ತವ್ಯಗಳನ್ನು ಸ್ಪಷ್ಟವಾಗಿ ತಿಳಿಸಿದ್ದರೂ, ಇನ್ನೂ ಜಾರಿಗೊಳಿಸಬೇಕಾದ ಹಲವಾರು ವಿಷಯಗಳನ್ನು ಇನ್ನೂ ಸ್ಥೂಲವಾಗಿ ಚರ್ಚಿಸಬೇಕಾಗಿದೆ. ಕಾರ್ಯಾಗಾರವು ಸಮಿತಿಯ ಪಾತ್ರ, ಕರ್ತವ್ಯಗಳು, ಕಾರ್ಯವಿಧಾನದ ಪ್ರಕ್ರಿಯೆಗಳನ್ನು ಸಮುದಾಯದೊಳಗೆ ಮತ್ತು ದೊಡ್ಡ ವಾರ್ಡ್ ಸಮೂಹದ ಜೊತೆಗೆ ಚರ್ಚಿಸುವುದರ ಜೊತೆಗೆ ಬುದ್ಧಿವಂತಿಕೆ ಮತ್ತು ಮುಂದಾಲೋಚನೆಯಿಂದ ಸಮೂಹ ಮತ್ತು ಸಾರ್ವಜನಿಕರೊಂದಿಗೆ ಬೆರೆಯುವ ಒಂದು ಸದಾವಕಾಶವಾಗಿದೆ.

**"ಇದನ್ನು ಮಾಡುವುದು ಹೇಗೆ"** 2 ನೇ ಕಾರ್ಯಾಗಾರವು 2018 ಜನವರಿ 19, ಶುಕ್ರವಾರದಂದು ಸಂಜೆ 5.30 ಯಿಂದ 8.30 ವರೆಗೆ, ಇ.ಎಸ್.ಜಿ. ವರ್ಕಶಾಪ್ ಸ್ಪೇಸ್, 1575, ರಿಂಗ್ ರೋಡ್, ಬನಶಂಕರಿ ಸೆಕೆಂಡ್ ಸ್ಟೇಜ್, ಬೆಂಗಳೂರು 560070 (ನೋದಣಿ ಅಗತ್ಯವಿದೆ, ವಿವರಣೆಗೆ ಕೆಳಗೆ ನೋಡಿ)

## ಕಾರ್ಯಾಗಾರ ನಡೆಸಿಕೊಡುವವರು:

- ಲಿಯೋ ಎಫ್.ಸಾಲ್ಡಾನ್ಹಾ, ಸಂಚಾಲಕರು, ಪರಿಸರ ಬೆಂಬಲ ತಂಡ (ಎಎಸ್‌ಜಿ)
- ಡಾ.ಶ್ವೇತಾ ರಾನ್ ಧನಂಕಾ, ನಗರ ಸಮಾಜಶಾಸ್ತ್ರಜ್ಞರು, ಬೆಂಗಳೂರು ನಗರ ಸಾಮಾಜಿಕ ನ್ಯಾಯ ಮತ್ತು ನಗರ ಸಮಸ್ಯೆಗಳ ಬಗ್ಗೆ ಭೋದಿಸಿದ್ದು, ಸಂಶೋಧನೆಗಳಲ್ಲಿ ನಿರತರಾಗಿದ್ದಾರೆ ಹಾಗೂ ಪ್ರಸ್ತುತ ಪರಿಸರ ಬೆಂಬಲ ತಂಡದೊಂದಿಗೆ ಸಮಾಲೋಚಿಸುತ್ತಿದ್ದಾರೆ.
- ವಿನಯ್ ಶ್ರೀನಿವಾಸ, ವಕೀಲರು ಮತ್ತು ನಗರಾಭಿವೃದ್ಧಿ ಕಾರ್ಯಕರ್ತರು ಹಾಗೂ ಪರ್ಯಾಯ ಕಾನೂನು ವೇದಿಕೆ (ಎಎಲ್‌ಎಫ್) ನೊಂದಿಗೆ ಕೆಲಸ ಮಾಡುತ್ತಿದ್ದಾರೆ.

## "ಹೇಗೆ" ಕಾರ್ಯಾಗಾರದ ಸರಣಿಯ ಕುರಿತು:

ನಮ್ಮ ಜ್ಞಾನ ಮತ್ತು ನೈಪುಣ್ಯತೆಯನ್ನು ಉಪಯೋಗಿಸಿ ಬೆಂಗಳೂರಿನ ಜೀವನಮಟ್ಟವನ್ನು ಸುಧಾರಿಸಲು ನಮ್ಮನ್ನು ನಾವು ಹೇಗೆ ತಯಾರುಗೊಳಿಸಬಹುದು ಎಂಬುದನ್ನು ಈ ಕಾರ್ಯಾಗಾರವು ತಿಳಿಸುತ್ತದೆ. ಪರಿಸರ, ಸಾರ್ವಜನಿಕ ಆರೋಗ್ಯದ ಕಾಳಜಿ, ಸಾಮಾಜಿಕ ಐಕ್ಯತೆ, ಸಾಮಾಜಿಕ–ಆರ್ಥಿಕ ಸಮಾನತೆ, ಪ್ರಾತಿನಿಧ್ಯದ ಮೂಲಕ ನಿರ್ಧಾರ ಕೈಗೊಳ್ಳುವಿಕೆ, ಹೇಗೆ ಅದನ್ನು ನಮ್ಮ ಜೀವನದಲ್ಲಿ ತೊಡಗಿಸಿಕೊಳ್ಳಬಹುದು ಎಂಬ ನಿರ್ದೇಶನಗಳನ್ನು ನಮಗೆ ಈ ಕಾರ್ಯಾಗಾರವು ನೀಡುತ್ತದೆ.ಮಾಹಿತಿಯುಕ್ತ ಮತ್ತು ವ್ಯವಸ್ಥಿತ ಜನತೆ ನಗರದ ಮೇಲೆ ಮರುಪ್ರಭಾವ ಬೀರಬಹುದು ಎನ್ನುವ ಬಗ್ಗೆ ಇದು. "ವಿಶ್ವದರ್ಜೆಯ ನಗರ" ಮತ್ತು "ಸ್ಮಾರ್ಟ್ ಸಿಟಿ"ಯಂತಹ ಉನ್ನತ ಕಲ್ಪನೆಗಳನ್ನು ರೂಪಿಸಲು ಸಾರ್ವಜನಿಕರನ್ನು ಸಂಘಟಿಸಲು ಇದು ಮಾಹಿತಿ ನೀಡುತ್ತದೆ.

ಸಂಕುಚಿತ ಮನೋಭಾವದ ಮತ್ತು ನಿರ್ಣಾಯಕ ಉನ್ನತವರ್ಗದ ನಿರ್ಮಾತೃಗಳು ಅಸಂವಿಧಾನಿಕ ವಿಧಾನದಿಂದ ಲಾಭಗಳಿಸಲು ಒಲವು ತೋರುತ್ತಿದ್ದಾರೆ. ಈ ಪ್ರಕ್ರಿಯೆಯಿಂದಾಗಿ, ಆರ್ಥಿಕ ಮತ್ತು ಆಡಳಿತಾತ್ಮಕ ಸಂಪನ್ಮೂಲಗಳ ಕೊರತೆಯನ್ನು ನಿರ್ಧಾರಿತ ಯೋಜನೆಗಳಿಗೆ ತಿರುಗಿಸಲಾಗಿದೆ ಮತ್ತು ಜನರ ಮೂಲಭೂತ ಅಗತ್ಯಗಳಿಂದ ದೂರವುಳಿದಿದೆ. ಸಾಮಾಜಿಕ ಐಕ್ಯತೆ, ಸಾರ್ವನಿಕ ಆರೋಗ್ಯ, ಸಾರ್ವಜನಿಕ ಸಾರಿಗೆ ವ್ಯವಸ್ಥೆ, ಶೈಕ್ಷಣಿಕ ಮತ್ತು ವಸತಿ ಸೌಲಭ್ಯಗಳು, ಪರಿಸರ ಸಂರಕ್ಷಣೆ, ಸುರಕ್ಷಿತ ನೆರೆಹೊರೆಯು ಎಲ್ಲರಿಗೂ ಸಿಗುವಂತೆ ಮಾಡುವುದರ ಕಡೆಗೆ ಗಮನ ನೀಡುವುದು ಇಂದಿನ ತುರ್ತು. ಆ ಮೂಲಕ ಎಲ್ಲರನ್ನು ಒಳಗೊಂಡ, ಸುಸ್ಥಿರ ನಗರಗಳು ಎಲ್ಲರಿಗೂ ಸಿಗುವಂತೆ ಮಾಡುವುದು. ಈ ಸಮಸ್ಯೆಗಳನ್ನು ಹೇಗೆ ಬಗೆಹರಿಸುವುದು ಎನ್ನುವ ಬಗ್ಗೆ ಹಲವಾರು ಚರ್ಚೆಗಳು ನಡೆದಿವೆ, ಆದರೆ ಸಾಂಘಿಕ ಕಲಿಕೆಯ ಮೂಲಕ ಪರಿಣಾಮಕಾರಿಯಾಗಿ ಬದಲಾವಣೆ ತರುವ ನಿಟ್ಟಿನಲ್ಲಿ ಅತೀ ಕಡಿಮೆ ವಾಸ್ತವಿಕ ಮಾಹಿತಿ ಇದೆ. ಪರಸ್ಪರರಿಂದ ಪ್ರೇರಣೆಗೊಂಡು ವಿಭಿನ್ನ ಭೌಗೋಳಿಕ ಹಿನ್ನೆಲೆಯಿಂದ ಸ್ಪೂರ್ತಿಗೊಂಡು, ನಮ್ಮ ನಗರವನ್ನು ಅಭಿವೃದ್ಧಿಪಡಿಸಲು ಪರಿಣಾಮಕಾರಿ ಮತ್ತು ತಾತ್ವಿಕವಾದ ಹಾದಿಗಳಲ್ಲಿ ಒಟ್ಟಾಗಿ ಪ್ರಯತ್ನಿಸುವ ಅಗತ್ಯವಿದೆ.

"ಹೇಗೆ ಮಾಡುವುದು" ಕಾರ್ಯಾಗಾರಗಳ ಈ ಸರಣಿಯಲ್ಲಿ, ವಿವಿಧ ಸಮೂಹ ಮತ್ತು ಕ್ಷೇತ್ರಗಳು ಮತ್ತು ಸಮುದಾಯಗಳ ಪ್ರತಿನಿಧಿಗಳು, ಅನುಭವಿ ಮಾರ್ಗದರ್ಶಿಗಳ ಜೊತೆಗೆ ಕೆಲಸ ಮಾಡಿ, ಭಾಗವಹಿಸುವಿಕೆಯ ವಿಧಾನಗಳ ಮೂಲಕ ಬದಲಾವಣೆಗೆ ಪರಿಹಾರಗಳನ್ನು ರೂಪಿಸುವತ್ತ ಗಮನಹರಿಸಿ ಸಾರ್ವಜನಿಕ ಹಿತಾಸಕ್ತಿಯ ವಿಷಯಗಳಲ್ಲಿ ಆಪ್ತವಾಗಿ ಕಾರ್ಯನಿರ್ವಹಿಸಲಿದ್ದಾರೆ. ಅರ್ಥಪೂರ್ಣ, ಅಂತರ್ಗತ ಮತ್ತು ಉತ್ಪಾದಕ ವಿಧಾನಗಳಲ್ಲಿ ನಾಗರಿಕ ವ್ಯವಹಾರಗಳನ್ನು ನಿರ್ಮಿಸುವುದು ಮತ್ತು ಹೆಚ್ಚಿಸುವುದು ಇದರ ಉದ್ದೇಶವಾಗಿದೆ. "ಹೇಗೆ ಮಾಡಹುದು" ಎಂಬ ಪ್ರಶ್ನೆಗೆ ನಾವೆಲ್ಲ ಉತ್ತರಿಸಬೇಕಾಗಿದೆ.

ಉದಾಹರಣೆಗೆ, ಕೆರೆಗಳನ್ನು ವ್ಯವಸ್ಥಿತಗೊಳಿಸುವುದು ಮತ್ತು ಸಂರಕ್ಷಣೆ ಹೇಗೆ? ಉತ್ತಮ ಹಾಗೂ ಆರೋಗ್ಯಕರ ನೆರೆಹೊರೆಯನ್ನು ಹೇಗೆ ಉಳಿಸಿಕೊಳ್ಳಬಹುದು? ಉತ್ತಮ ಹಸಿರು ನೆರೆಹೊರೆ ಹೇಗೆ? ನಮ್ಮ ಮನೆ ಮತ್ತು ಕಚೇರಿಗಳನ್ನು ಹೇಗೆ ಹಸಿರಾಗಿಸಬಹುದು? ನಾಗರಿಕ ಸಂರಕ್ಷಣೆಯನ್ನು ಹೇಗೆ ಸಂಘಟಿಸಬಹುದು? ನೆರೆಹೊರೆಯಲ್ಲಿ ಸುರಕ್ಷಿತವಾಗಿ ನಡೆಯಲು, ಸೈಕಲ್‌ನಲ್ಲಿ ಹೋಗಲು ಮತ್ತು ಪ್ರಯಾಣಿಸಲು ಯಾವ ಯೋಜನೆಗಳನ್ನು ಹಾಕಿಕೊಳ್ಳಬಹುದು?

***ಎಲ್ಲರಿಗೂ ಸುಸ್ವಾಗತ!***

ಈ ಕಾರ್ಯಾಗಾರದ ನೋಂದಣಿಗಾಗಿ "ಇದನ್ನು ಹೇಗೆ" ಎಂಬ ವಿಷಯದೊಂದಿಗೆ apoorva@esgindia.org ಗೆ ಇ–ಮೇಲ್ ಕಳುಹಿಸಬಹುದು.
ಅಥವಾ 080-2671360/61 ಗೆ ಕರೆ ಮಾಡಿ ನಿಮ್ಮ ಹೆಸರು, ವಿಳಾಸ ಮತ್ತು ನಿಮ್ಮ ವೃತ್ತಿ/ ನಿಮ್ಮ ಬಗ್ಗೆ ತಿಳಿಸಿ

ಪ್ರತಿಯೊಬ್ಬರಿಗೆ ಸೂಚಿತ ಕೊಡುಗೆ: ರೂ. 250 ಇದ್ದು, ನೀವು ಆನ್‌ಲೈನ್‌ನಲ್ಲಿ ಈ http://esgindia.org/about-us/what-you-can-do.html. ವಿಳಾಸಕ್ಕೆ ವಂತಿಗೆ ನೀಡಬಹುದು.

ಪರಿಸರ ಬೆಂಬಲ ತಂಡ (ಇಎಸ್‌ಜಿ), ನಂ. 1575, ರಿಂಗ್ ರೋಡ್, ಬನಶಂಕರಿ 2ನೇ ಹಂತ, ಬೆಂಗಳೂರು–560070
ಫೋನ್:: +91-80-26713560/61. Web: www.esgindia.org Email: esg@esgindia.org